ಉಪಾಧ್ಯಕ್ಷಿಣಿಯವರು.— ಈಗ (ಉತ್ತರವಿಲ್ಲ) ವಿಜಯಕುಮಾರ್ ಶೆಟ್ಟಿಯವರು ಪ್ರಶ್ನೆ ಕೇಳಬಹುದು.

ಶ್ರೀಮತಿ ಚಂದ್ರಪ್ರಭಾ ಅರಸು.— ಮಾನ್ಯ ಉಪಸಭಾಧ್ಯಕ್ಷಿಣಿಯವರೇ, ಪ್ರಾಬ್ಲಮ್ಯಾಟಿಕ್ ವಿಲೇಜಸ್ ಇವೆ ಎಂದು ಮಾನ್ಯ ಮಂತ್ರಿಗಳೂ ಹೇಳಿದರು. ಎಲ್ಲಾದರೂ ಬೋರ್‌ವೆಲ್‌ಗಳು ಅಂದರೆ ಕೊಳವೆ ಬಾವಿಗಳು ವಿಫಲ ಆಗಿದೆ ಎಂದು ಕಂಡು ಬಂದರೆ ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ನಾವೂ ಕೂಡಾ ಹಳ್ಳಿಗಳಲ್ಲಿ ಇದರ ಬಗ್ಗೆ ನೋಡಿದಾಗ ಅಲ್ಲಿ ಕೆಲವು ಕಟ್ಟುಪಾಡುಗಳು ಇವೆ. ಪಂಚಾಯತಿಯವರು ಇದಕ್ಕೆ ಶೇಕಡಾ ೨೫ ಭಾಗ ಮತ್ತು ಜಿಲ್ಲಾ ಪರಿಷತ್‌ನವರು ಶೇಕಡಾ ೫೦ ಭಾಗ ಕೊಡಬೇಕೆಂದು ನಿಬಂಧನೆ ಇದೆ. ಕೆಲವು ಪಂಚಾಯತಿಗಳಿಗೆ ಇದನ್ನು ಕೊಡುವುದಕ್ಕೆ ಸಾಮರ್ಥ್ಯ ಇಲ್ಲದೆ, ಹಣ ಸಾಲದೆ ತೊಂದರೆಯಾಗಿದೆ. ಇದಕ್ಕಾಗಿ ಸರಕಾರದಿಂದ ಹೆಚ್ಚಿನ ಹಣಕಾಸಿನ ಸಾಲಭ್ಯ ಒದಗಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷಿಣಿಯವರು.—ಈ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ.ವೈ. ಘೋರ್ಪಡೆ.—ರೂಲ್ಸ್ ಏನಾದರೂ ಇದಕ್ಕೆ ಅಡ್ಡಿ ಬರುತ್ತಿದ್ದರೆ, ರೂಲ್ಸ್ ಬದಲಾಯಿಸುವುದೇನೂ ಕಷ್ಟ ಆಗುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್.—ಇದಕ್ಕಾಗಿ ಹಣ ಕಟ್ಟುವ ವ್ಯವಸ್ಥೆ ಇಲ್ಲ. ಸರಕಾರದ ನೀತಿ ಬದಲಾಗಿದೆ.

ಶ್ರೀ ಎಂ.ವೈ. ಘೋರ್ಪಡೆ.—ನೀರು ಇಲ್ಲದ ಕಡೆ ನೀರು ಕೊಡಬೇಕು. ಇದಕ್ಕೆ ರೂಲ್ಸ್ ಏನಾದರೂ ಅಡ್ಡ ಬಂದರೆ ಅದನ್ನು ಸರಿಪಡಿಸುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್.—ರೂಲ್ಸ್ ಇಲ್ಲ.

ಸೂರತ್ಕಲ್ ಸರ್ಕಾರಿ ಆಸ್ಪತ್ರೆ

೧೪೩. ಶ್ರೀ ವಿಜಯಕುಮಾರ್ ಶೆಟ್ಟಿ (ಸೂರತ್ಕಲ್) —ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸೂರತ್ಕಲ್ ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾದ ಪೀಠೋಪಕರಣಗಳು ಇಲ್ಲದಿರುವುದು ಹಾಗೂ ಕಟ್ಟಡವು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಮೇಲ್ಕಂಡ ಆಸ್ಪತ್ರೆಯಲ್ಲಿ ವೈದ್ಯರುಗಳಿದ್ದರೂ ಸರಿಯಾದ ಮೇಲುಸ್ತುವಾರಿ ವ್ಯವಸ್ಥೆ ಇಲ್ಲದೆ ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಮಂತ್ರಿಗಳು).—

ಅ) ಪೀಠೋಪಕರಣಗಳು ಸಾಕಷ್ಟಿವೆ. ಕಟ್ಟಡ ದುಸ್ಥಿತಿಯಲ್ಲಿರುವುದು ನಿಜ. ರೂ. ೬೯ ಸಾವಿರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಪ್ರಸಕ್ತ ಆರ್ಥಿಕ ಸಾಲಿನಲ್ಲಿ ದುರಸ್ತಿಯನ್ನು ಕೈಗೊಳ್ಳಲಾಗುವುದು.

ಆ) ಸಾರ್ವಜನಿಕರಿಗೆ ತೊಂದರೆ ಉಂಟಾಗಿರುವ ಬಗ್ಗೆ ಯಾವ ದೂರು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಕಟ್ಟಡದ ದುರಸ್ತಿಯನ್ನು ಜಿಲ್ಲಾ ಪರಿಷತ್ ಮುಖ್ಯಾಂತರ ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ವಿಜಯಕುಮಾರ್ ಶೆಟ್ಟಿ.—ಸೂರತ್ಕಲ್ ಸರ್ಕಾರಿ ಆಸ್ಪತ್ರೆಯಲ್ಲಿ ಆಪರೇಷನ್ ಥಿಯೇಟರ್ ಸರಿಯಾಗಿಲ್ಲ. ಲೇಬರ್ ವಾರ್ಡ್ ಥಿಯೇಟರ್ ಸಮೇತ ಸರಿಯಿಲ್ಲ. ಮೊನ್ನೆ ಲೆಪ್ರೋಸ್ಕೊಪಿಕ್ ಆಪರೇಷನ್‌ಗೆ ಬಂದಂಥ ರೋಗಿಗಳನ್ನು ಅಲ್ಲಿನ ಡಾಕ್ಟರ್‌ರವರು ಆಪರೇಷನ್ ಥಿಯೇಟರ್ ಸರಿಯಾಗಿಲ್ಲ ಎಂದು ಆಪರೇಷನ್ ಮಾಡುವುದಕ್ಕೆ ಒಪ್ಪದೆ ವಾಪಸ್ ಕಳುಹಿಸಿದ್ದಾರೆ. ಲೇಬರ್ ವಾರ್ಡ್ ಥಿಯೇಟರ್‌ನ ಆಪರೇಷನ್ ಟೇಬಲ್ ಮಣ್ಣು ಹಿಡಿದಿದೆ. ದಯವಿಟ್ಟು ಆದಷ್ಟು ಶೀಘ್ರದಲ್ಲಿ ಇದಕ್ಕೆ ದುರಸ್ತಿಗಾಗಿ ಹಣವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಆಸ್ಪತ್ರೆ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದರಿಂದ ಅವರೇ ಕಟ್ಟಡ ದುರಸ್ತಿಗಾಗಿ ಹಣವನ್ನು ಖರ್ಚು ಮಾಡ

ಬೇಕಾಗಿರುತ್ತದೆ. ತಮಗೆ ತಿಳಿದ ಪ್ರಕಾರ ಈ ವರ್ಷ ೬೯ ಸಾವಿರ ರೂಪಾಯಿಗಳಿಗೆ ಪ್ರಸ್ತಾವನೆಯನ್ನು ಜಿಲ್ಲಾ ಪರಿಷತ್ ಎಂಜಿನಿಯರಿಂಗ್ ವಿಭಾಗದವರು ಸಲ್ಲಿಸಿರುತ್ತಾರೆ. ಕಟ್ಟಡ ರಿಪೇರಿ ಮಾಡುವುದಕ್ಕೆ ಅವರು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಕೆ. ಸೋಮಪ್ಪ ಸುವರ್ಣ.— ಈಗಾಗಲೇ ಆಸ್ಪತ್ರೆಗಳಿಗೆ ಎಕ್ಸರೇ ಪ್ಲಾಂಟ್‌ಗಳನ್ನು ಕೊಟ್ಟಿದ್ದಾರೆ. ಇವು ಎರಡು ಲಕ್ಷ ರೂಪಾಯಿ ಬೆಲೆ ಬಾಳುತ್ತವೆ. ಎಕ್ಸರೇ ಪ್ಲಾಂಟ್‌ಗಳನ್ನು ಕೊಟ್ಟರೂ ಡಾಕ್ಟರ್‌ಗಳನ್ನು ಕೊಡಲಿಲ್ಲ. ಟೆಕ್ನೀಷಿಯನ್ಸ್‌ಅನ್ನು ಕೊಡಲಿಲ್ಲ. ಇದರಿಂದಾಗಿ ಇವು ಮಣ್ಣು ಹಿಡಿದು ತುಕ್ಕು ಹಿಡಿದು ಹಾಳಾಗುತ್ತಿವೆ. ಆದುದರಿಂದ ಎಕ್ಸ್‌ರೇ ಪ್ಲಾಂಟ್ ಆಪರೇಟ್ ಮಾಡುವುದಕ್ಕೆ ಬೇಕಾದಂಥ ಟೆಕ್ನೀಷಿಯನ್ಸ್ ಅನ್ನು ಅಪಾಯಿಂಟ್ ಮಾಡುವುದಕ್ಕೆ ಸರಕಾರ ಕ್ರಮ ಕೈಗೊಳ್ಳಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.— ಇದಕ್ಕೆ ಪ್ರತ್ಯೇಕವಾದ ಪ್ರಶ್ನೆ ಹಾಕಬೇಕು. ಏಕೆ ದರೆ ನಾನು ಈಗ ಸೂರತ್ಕಲ್ ಕ್ಷೇತ್ರದ ಆಸ್ಪತ್ರೆಗೆ ಸಂಬಂಧಪಟ್ಟಂತೆ ಉತ್ತರ ಕೊಡುತ್ತಿದ್ದೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ.— ಜಿಲ್ಲಾ ಪರಿಷತ್‌ಗೆ ನಾವು ಹಲವಾರು ಸಲ ನಿವೇದಿಸಿಕೊಂಡಿದ್ದೇವೆ. ಅವರು ಮೆಡಿಸಿನ್ಸ್ ಕೊಡುವುದಕ್ಕೆ ಮಾತ್ರ ನಮಗೆ ಅಧಿಕಾರ ಇದೆ. ರಿಪೇರಿ ಬಗ್ಗೆ ಸರಕಾರಕ್ಕೆ ರಿಕ್ವೆಸ್ಟ್ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಆದುದರಿಂದ ಆದಷ್ಟು ಬೇಗ ಬಹಳ ಆಗತ್ಯ ಇರುವುದರಿಂದ ಇದಕ್ಕೆ ಅಡಿಷನಲ್ ಅಮೌಂಟನ್ನು ದಯವಿಟ್ಟು ಸ್ಯಾಂಕ್ಷನ್ ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.— ಮಾನ್ಯ ಉಪಾಧ್ಯಕ್ಷೆಯವರೇ, ಈ ಬಗ್ಗೆ ಮಾನ್ಯ ಆರ್ಥ ಸಚಿವರ ಹತ್ತಿರ ಸಮಾಲೋಚನೆ ಮಾಡಿ ಏನಾದರೂ ಹಣವನ್ನು ಜಿಲ್ಲಾ ಪರಿಷತ್ ಮುಖಾಂತರ ಒದಗಿಸುವುದಕ್ಕೆ ಪ್ರಯತ್ನ ಉಂಟೆ ಎಂದು ಕೇಳುತ್ತೇನೆ.

ಹೆಗ್ಗಡದೇವನ ಕೋಟೆಯಿಂದ ಶ್ರೀಗಂಧ ಕಳ್ಳ ಸಾಗಾಣಿಕೆ

೧೭೯. ಶ್ರೀ ಎಂ. ಪಿ ವೆಂಕಟೇಶ್ (ಹೆಗ್ಗಡ ದೇವನಕೋಟೆ).— ಮಾನ್ಯ ಅರಣ್ಯ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ಹೆಗ್ಗಡದೇವನ ಕೋಟೆಯಿಂದ ಕೇರಳಕ್ಕೆ ಗೊಬ್ಬರದ ಸಾಗಾಣಿಕೆಯಲ್ಲಿ ಶ್ರೀಗಂಧ ಸಾಗುವಾನಿ ಬೀಟೆ ಮರಗಳ ಕಳ್ಳ ಸಾಗಾಣಿಕೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

೨) ಹಾಗಿದ್ದಲ್ಲಿ ಈ ಕಳ್ಳ ಸಾಗಾಣಿಕೆಯನ್ನು ತಡೆಯಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಹಾಗೂ ಪಶುಸಂಗೋಪನ ಮಂತ್ರಿಗಳು).—

೧) ಬಂದಿಲ್ಲ

೨) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ.ಪಿ. ವೆಂಕಟೇಶ್.— ಮಾನ್ಯ ಅಧ್ಯಕ್ಷಣೀಯವರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೆಗ್ಗಡದೇವನ ಕೋಟೆಯಿಂದ ಕೇರಳಕ್ಕೆ ಗೊಬ್ಬರದ ಸಾಗಾಣಿಕೆಯಲ್ಲಿ ಶ್ರೀಗಂಧ ಸಾಗುವಾನಿ ಬೀಟೆ ಮರಗಳ ಕಳ್ಳಸಾಗಾಣಿಕೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ನಾನು ಕಳೆದ ಅಧಿವೇಶನದಲ್ಲಿ ಒಂದು ಗಮನ ಸೆಳೆಯುವ ಸೂಚನೆ ಮುಖಾಂತರ ಮಾನ್ಯ ಅರಣ್ಯ ಸಚಿವರ ಗಮನಕ್ಕೆ ಈ ವಿಷಯ ತಂದಿದ್ದೆ. ಅಲ್ಲಿ ಮರಗಳ ಕಳ್ಳಸಾಗಾಣಿಕೆಯಾಗುತ್ತಿದೆ. ಗೊಬ್ಬರದ ಚೀಲಗಳಲ್ಲಿ ಮರ ಸಾಗಿಸುತ್ತಿದ್ದಾರೆ. ನಾನು ಸರ್ಕಾರದ ಗಮನಕ್ಕೆ ಸಹ ತಂದಿದ್ದೇನೆ. ಹೆಗ್ಗಡದೇವನ ಕೋಟೆ ಕೃಷಿ ಸಂಘದವರು ಗಲಾಟೆ ಸಹ ಮಾಡಿದ್ದಾರೆ. ಗೊಬ್ಬರದ ಚೀಲಗಳಲ್ಲಿ ಲಕ್ಷಾಂತರ ರೂಪಾಯಿಗಳಷ್ಟು ಬೆಲೆ ಬಾಳುವಂತಹ ಮರಗಳನ್ನು ಪ್ರತಿ ನಿತ್ಯ ಸುಮಾರು ೨೦೦ ಲಾರಿಗಳಷ್ಟು ಸಾಗಿಸುತ್ತಿದ್ದಾರೆ. ಮೈಸೂರಿನ ಗುಂಡ್ಲುಪೇಟೆ ರಸ್ತೆ ಮುಖಾಂತರ ಮತ್ತು ಹೆಗ್ಗಡದೇವನಕೋಟೆ ರಸ್ತೆ ಮುಖಾಂತರ ಎರಡೂ ಬಾರ್ಡರ್‌ಗಳಿಂದ ಕೇರಳಕ್ಕೆ ಮರ ಸಾಗಿಸುತ್ತಿದ್ದಾರೆ. ಈ ಲಾರಿಗಳನ್ನು ಚೆಕ್ ಮಾಡುವಂತಹ ಅವಕಾಶ ಇಲ್ಲಿ, ಗೋಣಿ ಚೀಲಗಳಲ್ಲಿ ಮರ ತುಂಬಿಕೊಂಡು ಲಾರಿಗಳಿಗೆ ಹಾಕಿ ಅದರ ಮೇಲೆ ಗೊಬ್ಬರ ಹಾಕಿಕೊಂಡು ಮರ ಸಾಗಿಸುತ್ತಾರೆ. ಅಲ್ಲಿ ವಂರಗಳು ದುರುಪಯೋಗವಾಗುತ್ತಿವೆ. ಇನ್ನು ಅರಣ್ಯ ಇಲಾಖೆಯಲ್ಲಿ ನಡೆದ ವರ್ಗಾವಣೆಗಳಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿದೆ. ಅದೂ ಭ್ರಷ್ಟಾಚಾರ ಹೇಗೆ ನಡೆದಿದೆ, ಎಂದರೆ, ಹೋಟಲ್‌ಗಳಲ್ಲಿ ಇಡಿ ಸಾಂಬರ್‌ಗೆ ಒಂದು ರೇಟ್ ಇರುತ್ತದೆ ನೋಡಿ, ಆ ರೀತಿ ಅಧಿಕಾರಿಗಳು ದುಡ್ಡು ಕೊಟ್ಟು ವರ್ಗಾವಣೆ